ದುರಸ್ತಿ ಕೆಲಸ ಕೈಗೆತ್ತಿಕೊಳ್ಳಲಾಗಿದೆ.

ಶವಾಗಾರ: ಶೀತಲ ಶವಾಗಾರ ಇದೀಗ ಸರಿಯಾಗಿ ಕೆಲಸ ನಿರ್ವಹಿಸುತ್ತಿದ್ದು ಕೆಹೆಚ್ಎಸ್ಡಿಸಿ. ಅಡಿಯಲ್ಲಿ 3 ಹೊಸ ಮಾದರಿ ಕೆ.ಬಿ.ಸೆಟ್ಗಳು ಬಂದಿದ್ದು ಅವುಗಳನ್ನು ವಿದ್ಯುತ್ ಜೋಡಣೆಯೊಂದಿಗೆ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ.

ಡ್ರೈನೇಜ್: ಲೋಕೋಪಯೋಗಿ ಇಲಾಖೆಯಿಂದ ಡ್ರೈನೇಜ್ ದುರಸ್ಥಿ ಕೆಲಸಗಳು ನಡೆಯುತ್ತಲಿದ್ದು, ಡ್ರೈನೇಜ್ನಿಂದ ಹೆಚ್ಚಿನ ತೊಂದರೆ ಸದ್ಯಕ್ಕೆ ಇರುವುದಿಲ್ಲ.

ಸಿ. ಸಂಬಂಧಪಟ್ಟ ಆಸ್ಪತ್ರೆಗಳ ಮುಖ್ಯಸ್ಥರಿಂದ ಸರ್ಕಾರದ ಹೊಸ ನಿಯಮದ ಪ್ರಕಾರ 20 ಸದಸ್ಯರನ್ನೊಳಗೊಂಡ ಪ್ರಸ್ತಾವನೆ ಬಾರದಿರುವುದರಿಂದ ನೇಮಕ ಮಾಡಿರುವುದಿಲ್ಲ ನಿಯಮದ ಪ್ರಕಾರ ಪ್ರಸ್ತಾವನೆ ಬಂದಿಲ್ಲ ಪರಿಶೀಲಿಸಲಾಗುವುದು.

ಡಿ. ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಮಂಗಳೂರಿನ ಕೆ.ಎಂ.ಸಿ. ವಿದ್ಯಾಸಂಸ್ಥೆಯು ಸೇರಿದಂತೆ ಇತರೆ 12 ವಿದ್ಯಾ ಸಂಸ್ಥೆಗಳು ಕ್ಲಿನಿಕಲ್ ಸೌಲಭ್ಯ ಪಡೆಯುತ್ತಿದೆ. ಕಾಲ ಕಾಲಕ್ಕೆ ಕ್ಲಿನಿಕಲ್ ಶುಲ್ಕವನ್ನು ವಸೂಲಿ ಮಾಡಿ ಜಂಟಿ ಖಾತೆಯಲ್ಲಿ ಜಮಾ ಮಾಡಲಾಗಿದೆ. ಬಾಕಿ ಏನು ಇರುವುದಿಲ್ಲ. ವಸೂಲಿ ಮಾಡಿದ ಕ್ಲಿನಿಕಲ್ ಶುಲ್ಕದ ಹಣವನ್ನು ಆಸ್ಪತ್ರೆಯ ಸುಧಾರಣೆಗೆ ಬಳಸಲಾಗುವುದು. ಈಗಾಗಲೇ ಲಿಫ್ಟ್ ದುರಸ್ತಿ ಮತ್ತು ಕ್ಷಕಿರಣ ಹಾಳೆಗಳನ್ನು ಕೊಳ್ಳಲು ಹಾಗೂ ರಕ್ತನಿಧಿ ವಿಭಾಗದ ಕಟ್ಟಡದ ನವೀಕರಣಗಳಿಗೆ ಬಳಸಿಕೊಳ್ಳಲಾಗಿದೆ. ಹಾಗೂ ಸದರಿ ಆಸ್ಪತ್ರೆಗೆ ಉಪಕರಣಗಳನ್ನು ಖರೀದಿಸಲು ಸರ್ಕಾರಿ ಆದೇಶ ಸಂಖ್ಯೆ: ಆಕುಕ 529 ಎಂಎಸ್ಎಫ್ 97 ದಿನಾಂಕ: 7-3-98ರಲ್ಲಿ ರೂ. 41,62,860-00ಗಳನ್ನು ಮಂಜೂರು ಮಾಡಲಾಗಿದೆ.

ತ್ಯಾಜ್ಯ ವಸ್ತುಗಳಿಂದ ಹಾನಿ.

90 (218)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ಎಂ.ಆರ್.ಪಿ.ಎಲ್.ಮತ್ತು ಬಿ.ಎ.ಎಸ್.ಎಫ್. ಸಂಸ್ಥೆಗಳು ಸಮುದ್ರಕ್ಕೆ ಬಿಡುತ್ತಿರುವ ತ್ಯಾಜ್ಯ ವಸ್ತುಗಳಿಂದ ಉಂಟಾಗುತ್ತಿರುವ ಪರಿಸರ ಹಾನಿಯ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ್ ನಿ.ಶಿವಣ್ಣನವರ್ (ಮಾನ್ಯ, ಪರಿಸರ, ಜೀವಿಶಾಸ್ತ್ರ, ವಿಜ್ಞಾನ ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು):

ಅ) ಎಂ.ಆರ್.ಪಿ.ಎಲ್.

ಎಂ.ಆರ್.ಪಿ.ಎಲ್. ಉದ್ದಿಮೆಯಿಂದ ಘಂಟೆಗೆ 110 ಘನ್ ಮೀ.ನಷ್ಟು ಕಲುಷಿತ ನೀರು ಹೊರಬರುತ್ತದೆ. ಈ ಕಲುಷಿತ ನೀರನ್ನು ಶುದ್ಧೀಕರಿಸಲು ಸೂಕ್ತ ಸಂಸ್ಕರಣ ಘಟಕಗಳನ್ನು ಉದ್ದಿಮೆಯು ಅಳವಡಿಸಿರುತ್ತದೆ. ಶುದ್ಧೀಕರಿಸಿದ ಕಲುಷಿತ ನೀರು ಕರ್ನಾಟಕ ರಾಜ್ಯ ಮಾಲಿನ್ಯ ಮಂಡಳಿ ನಿಗಧಿಪಡಿಸಿರುವ ಮಾನಕಕ್ಕೆ ಸರಿಹೊಂದುತ್ತಿರುತ್ತದೆ. ಶುದ್ಧೀಕರಿಸಿದ ಕಲುಷಿತ ನೀರನ್ನು ಸಮುದ್ರದಲ್ಲಿ ವಿಸರ್ಜಿಸಲು ಮಂಡಳಿಯು ಪರವಾನಗಿ ನೀಡಿತ್ತು. ಈ ನೀರನ್ನು ಸಮುದ್ರದಲ್ಲಿ ವಿಸರ್ಜಿಸಲು ಸೂಕ್ತವಾದ ಪ್ರದೇಶವನ್ನು ಗೋವಾದ, ಎನ್.ಐ.ಒ.(ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಷಿಯೋನೊಗ್ರಫಿ) ಅವರಿಂದ ಗುರುತು ಮಾಡಲಾಗಿದೆ. ಈ ಸ್ಥಳವು ಸಮುದ್ರ ತೀರದಿಂದ ಸುಮಾರು 900 ಮೀ. ದೂರದಲ್ಲಿದೆ. ರಾಜ್ಯ ಸರ್ಕಾರವು ತನ್ನ ಆಜ್ಞೆ ದಿನಾಂಕ 28-12-95ರಲ್ಲಿ ಉದ್ದಿಮೆಯು ಕಲುಷಿತ ನೀರನ್ನು ಶುದ್ಧೀಕರಿಸಿದ ಬಳಿಕ ಹೆಚ್ಚಿನ ಭಾಗವನ್ನು ಮರು ಉಪಯೋಗಿಸಿ ಹಾಗೂ ಸಮುದ್ರಕ್ಕೆ ಬಿಡುವ ನೀರಿನ ಪ್ರಮಾಣವನ್ನು ಕಡಿತಗೊಳಿಸಲು 31-12-97ರವರೆಗೆ ಕಾಲಾವಕಾಶವನ್ನು ನೀಡಿತ್ತು. ಅದರಂತೆ ಉದ್ದಿಮೆಯು (ಆಕ್ಟಿವೇಟೆಡ್ ಕಾರ್ಬನ್ ಫಿಲ್ಟರನ್ನು ಅಳವಡಿಸಿ) ಶೇ. 70ರಿಂದ 75ರಷ್ಟು ಕಲುಷಿತ ನೀರನ್ನು ಮರುಬಳಕೆ ಮಾಡುತ್ತಿದೆ. ಉಳಿದ ನೀರನ್ನು ಸಮುದ್ರಕ್ಕೆ ವಿಸರ್ಜಿಸಲಾಗುತ್ತಿದೆ. ಈ ನೀರಿನ ಪ್ರಮಾಣವು ಸುಮಾರು ಘಂಟೆಗೆ 30 ಘನ ಮೀ. ನಷ್ಟು ಇರುತ್ತದೆ. ಈ ವ್ಯವಸ್ಥೆಯನ್ನು ಇನ್ನೂ ಉತ್ತಮಪಡಿಸಲು ಉದ್ದಿಮೆಯ ಪ್ರಸ್ತಾವನೆಯನ್ನು ಮಂಡಳಿಗೆ ಸಲ್ಲಿಸಿತ್ತು. ಈ ವ್ಯವಸ್ಥೆಯನ್ನು ಇನ್ನೂ ಉತ್ತಮಪಡಿಸಲು ಉದ್ದಿಮೆಯ ಪ್ರಸ್ತಾವನೆಯನ್ನು ಮಂಡಳಿಗೆ ಸಲ್ಲಿಸಿತ್ತು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಹೆಚ್ಚು ಲವಣಾಂಶದ ಡಿ.ಎಂ. ಪ್ಲಾಂಟ್ ಬ್ಲೋ ಡೌನ್ ಘಂಟೆಗೆ 12 ಘನ.ಮೀ.ನಷ್ಟನ್ನು ಹೊರತುಪಡಿಸಿ ಮಿಕ್ಕ ಶುದ್ಧೀಕರಿಸಿದ ನೀರನ್ನು ಉದ್ದಿಮೆಯ ಶೀತಲೀಕರಣ, ಅಗ್ನಿ ಶಾಮಕ ಹಾಗೂ ಗ್ರೀನ್‌ಬೆಲ್ಟ್‌ಗೆ ಬಳಸುವಂತೆ ನಿರ್ಣಯಿಸಲಾಯಿತು. ಮರುಬಳಕೆಯ ನೀರಿನ ಗುಣಮಟ್ಟವನ್ನು ಮತ್ತಷ್ಟು ಸುಧಾರಿಸಲು ನೀರಿನ ಪ್ರಮಾಣವನ್ನು ಶೂನ್ಯಕ್ಕೆ ಹತ್ತಿರ ತರಲು ಮತ್ತು ಈ ವ್ಯವಸ್ಥೆಯನ್ನು ನಿರಂತರವಾಗಿ ನಡೆಸಲು ಸೂಕ್ತ ಆರ್ ಅಂಡ್ ಡಿ ಕಾರ್ಯವನ್ನು ನಡೆಸಿ ಪೈಲಟ್ ಪ್ಲಾಂಟ್‌ನ್ನು ಸ್ಥಾಪಿಸಿ ಮತ್ತು ಪೂರ್ಣ ಪ್ರಮಾಣವಾದ ಟೆರ್ಟಿಆರಿ ಶುದ್ಧೀಕರಣ ಘಟಕವನ್ನು ಸ್ಥಾಪಿಸಲು ಉದ್ದಿಮೆಗೆ 30-6-98ರವರೆಗೆ ಕಾಲಾವಕಾಶ ನೀಡಿದೆ. ಈ ನಿಬಂಧನೆಗಳೊಂಡ ಸರ್ಕಾರಿ ಆದೇಶವನ್ನು ಸಹ ದಿ:31-12-97ರಂದು ಪರಿಸರ ಇಲಾಖೆ ಹೊರಡಿಸಿರುತ್ತದೆ. ಈ ಆದೇಶದ ಅನುಸಾರ ಉದ್ದಿಮೆಯು ಘಂಟೆಗೆ ಸುಮಾರು 12 ಘನ ಮೀ.ನಷ್ಟು ಲವಣಾಂಶವಿರುವ ಕಲುಷಿತ ನೀರನ್ನು ಮಾತ್ರ

ಮಳೆಗಾಲವಲ್ಲದ ಸಮಯದಲ್ಲಿ ಸಮುದ್ರಕ್ಕೆ ಬಿಡಲು ಅನುಮತಿಸಲಾಗಿದೆ. ಮಳೆಗಾಲದಲ್ಲಿ ಮಂಡಳಿ ನಿಗಧಿಪಡಿಸಿರುವ ಮಾನಕಕ್ಕೆ ಸರಿಹೊಂದುವ ಮಳೆ ನೀರನ್ನು ಒಳಗೊಂಡು 342 ಘನ ಮೀ.ನಷ್ಟು ಶುದ್ಧೀಕರಿಸಿದ ಕಲುಷಿತ ನೀರನ್ನು ಸಮುದ್ರಕ್ಕೆ ವಿಸರ್ಜಿಸಲು ಅನುಮತಿಸಲಾಗಿದೆ. ಈ ಮರು ಬಳಕೆ ವ್ಯವಸ್ಥೆಯು ಇನ್ನೂ ಪ್ರಾರಂಭದ ಹಂತದಲ್ಲಿರುವ ಕಾರಣ ಹಾಗೂ ಕೆಲವು ತಾಂತ್ರಿಕ ತೊಂದರೆಗಳಿಂದಾಗಿ ಉದ್ದಿಮೆಯ ಸುಮಾರು ಘಂಟೆಗೆ 30ರಿಂದ 40 ಘನ ಮೀ.ನಷ್ಟು ಶುದ್ಧೀಕರಿಸಿದ ಕಲುಷಿತ ನೀರನ್ನು ಈಗ ಸಮುದ್ರಕ್ಕೆ ವಿಸರ್ಜಿಸಲಾಗುತ್ತಿದೆ.

ಸಮುದ್ರದ ನೀರಿನ ಹಾಗೂ ಇತರ ಜಲಚರಗಳ ಮೇಲಿನ ಪ್ರತಿಕೂಲದ ಅಧ್ಯಯನವನ್ನು ಉದ್ದಿಮೆಯು ಸಿಎಂಎಫ್ಆರ್ಐ ವತಿಯಿಂದ ನಡೆಸುತ್ತಿದೆ. ಈ ವರದಿಯನ್ವಯ ಈವರೆವಿಗೂ, ಉದ್ದಿಮೆಯು ಕಲುಷಿತ ನೀರನ್ನು ವಿಸರ್ಜಿಸುವ ಪ್ರದೇಶ ಹಾಗೂ ಸುತ್ತಮುತ್ತ ಯಾವ ಪ್ರತಿಕೂಲ ಆಘಾತ ಕಂಡು ಬಂದಿರುವುದಿಲ್ಲ.

ಬಿ.ಎ.ಎಸ್.ಎಫ್:

ಈ ಉದ್ದಿಮೆಯಿಂದ ದಿನಂಪ್ರತಿ 500 ಘನ ಮೀ. ಪ್ರಮಾಣದಲ್ಲಿ ಕಲುಷಿತ ನೀರು ಹೊರ ಬರುತ್ತಿದೆ. ಇದನ್ನು ಶುದ್ಧೀಕರಿಸಲು ಸಂಸ್ಕರಣ ಘಟಕಗಳನ್ನು ಉದ್ದಿಮೆಯು ಅಳವಡಿಸಿದೆ. ಶುದ್ಧೀಕರಿಸಿದ ಕಲುಷಿತ ನೀರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಗಧಿಪಡಿಸಿರುವ ಮಾನಕಕ್ಕೆ ಸರಿಹೊಂದುತ್ತಿರುತ್ತದೆ. ಮತ್ತು ಇದನ್ನು ಸಮುದ್ರ ತೀರದಿಂದ ಸುಮಾರು 1600 ಮೀ.ದೂರದಲ್ಲಿ ವಿಸರ್ಜಿಸಲಾಗುತ್ತಿದೆ. ಇದನ್ನು ಎನ್ಬಿಒ ಸಂಸ್ಥೆಯು ನಿಗಧಿಪಡಿಸಿರುವುದು.

ಉದ್ದಿಮೆಯು ಮೀನುಗಾರಿಕಾ ಕಾಲೇಜು ವತಿಯಿಂದ ಸಮುದ್ರದ ನೀರಿನ ಮತ್ತು ಜಲಚರ ಮಾನಕಗಳ ಮಾಪನ ಮಾಡುತ್ತಿದ್ದು ಈವರೆವಿಗೂ ಯಾವ ಪ್ರತಿಕೂಲ ಆಘಾತ ವರದಿಯಾಗಿರುವುದಿಲ್ಲ.

ಮಂಗಳೂರು ನಗರದಲ್ಲಿ ಶಾಲಾ ಕಟ್ಟಡಗಳ ದುರಸ್ಥಿ

91 (216)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ನಗರದ ಬಲ್ಮಠ ಮಹಿಳಾ ಕಾಲೇಜು, (2) ಬೊಕ್ಕಪಟ್ಟ, ಪಿಯುಸಿ ಕಾಲೇಜು (3) ರಥಬೀದಿ ಮಹಿಳಾ ಕಾಲೇಜುಗಳಲ್ಲಿ ಎಷ್ಟು ಹಾಗೂ ಯಾವ ಯಾವ ಅಧ್ಯಾಪಕರುಗಳ ಸಿಬ್ಬಂದಿಗಳ ಕೊರತೆಗಳಿವೆ? ಹಾಗೂ ಅವುಗಳನ್ನು ಯಾವಾಗ